**<u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಬೈಂದೂರು</u>**

**ಸಿಸಿ ನಂಬ್ರ: 1141/2023** **ಸಿಡಬ್ಲ್ಯೂ -3**

**ಪಿಡಬ್ಲ್ಯೂ** - 3

ಸಾಕ್ಷಿದಾರರ ಹೆಸರು : ರಾಮನಾಥ ಪ್ರಭು

ತಂದೆಯ ಹೆಸರು : ಗಣಪತಿ

ಪ್ರಾಯ : 48 ವರ್ಷ

ಉದ್ಯೋಗ : ವ್ಯಾಪಾರ

ವಾಸ : ನಂದನವನ

ದಿನಾಂಕ: 07-09-2026ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

**<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ಚಾ.ಸಾ.1, 2 ಮತ್ತು 4 ರವರ ಪರಿಚಯ ಇರುವುದಿಲ್ಲ. ಆರೋಪಿ ಪರಿಚಯ ಇರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

ಸುಮಾರು ಎರಡು ವರ್ಷಗಳ ಹಿಂದೆ ನಾನು ನನ್ನ ಅಂಗಡಿಯಲ್ಲಿರುವಾಗ ಅಂಗಡಿಯ ಮುಂದೆ ರಸ್ತೆಯಲ್ಲಿ ಒಂದು ಶಬ್ದ ಕೇಳಿ ನೋಡಿದಾಗ ಒಂದು ಕಾರಿಗೂ ಮತ್ತು ಸೈಕಲ್ ಗೆ ಅಪಘಾತವಾಗಿತ್ತು. ತಕ್ಷಣ ಅಲ್ಲಿ ಸಾರ್ವಜನಿಕರು ಸೇರಿದ್ದರು. ನಾನು ಯಾರಿಗೆ ಏನಾಗಿರುತ್ತದೆ ಎಂದು ನೋಡಿರುವುದಿಲ್ಲ , ಹಿಂದಿರುಗಿ ಅಂಗಡಿಗೆ ಬಂದಿರುತ್ತೇನೆ. ನನಗೆ ಬೇರೆ ಏನೂ ವಿಚಾರ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ , ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಅಪಘಾತಕೊಳಪಟ್ಟ ಕಾರು ಮತ್ತು ಸೈಕಲ್ ನ ಭಾವಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಾರಿನ ಎರಡು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಸೈಕಲ್ ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ

ನಿಪಿ 8 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಲು ವಿನಂತಿಸಿಕೊಂಡಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ದಿಃ 02-12-2019 ರಂದು ನೀವು ಅಂಗಡಿಯಲ್ಲಿ ವ್ಯಾಪಾರವಿಲ್ಲದ ಕಾರಣ ಅಂಗಡಿ ಹೊರಗಡೆ ನಿಂತುಕೊಂಡಿರುವಾಗ ಸಮಯ ಸಮಯ ಸಂಜೆ 05.45 ಗಂಟೆಗೆ ನಿಪಿ 5 ರಲ್ಲಿ ಕಂಡ ಕಾರನ್ನು ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ರಸ್ತೆಯ ತೀರ ಬಲಭಾಗಕ್ಕೆ ಚಲಾಯಿಸಿ ನಿಮ್ಮ ಅಂಗಡಿಯ ಎದುರು ಯು ಟರ್ನ್ ಬಳಿ ಸೈಕಲ್ ಸವಾರಿ ಮಾಡಿಕೊಂಡು ಹೋಗುತ್ತಿದ್ದ ವ್ಯಕ್ತಿಯ ಸೈಕಲ್ ಗೆ ಹಿಂದಿನಿಂದ ಡಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಡಿಕ್ಕಿಯ ಪರಿಣಾಮ ಸೈಕಲ್ ಸವಾರ ರಸ್ತೆಗೆ ಬಿದಿದ್ದು ಕಾರು ಚಾಲಕನು ಸದರಿ ಕಾರನ್ನು ಸ್ವಲ್ಪ ಮುಂದೆ ನಿಲ್ಲಿಸಿ ಬಿದ್ದ ವ್ಯಕ್ತಿಯನ್ನು ಉಪಚರಿಸಲು ಬಂದಿರುತ್ತಾರೆ ಎಂದರೆ ಸರಿಯಲ್ಲ. ನೀವೂ ಸಹ ಸದರಿ ಸೈಕಲ್ ಸವಾರನ್ನು ಉಪಚರಿಸಲು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಆಗ ಸಾರ್ವಜನಿಕರು ಸೇರಿರುತ್ತಾರೆ ಎಂದರೆ ಸರಿ. ಗಾಯಗೊಂಡ ವ್ಯಕ್ತಿಯ ಹೆಸರು ನಾಗಯ್ಯ ಪೂಜಾರಿ ಎಂದು ನಿಮಗೆ ತಿಳಿಯಿತು , ಆತನ ತಲೆಗೆ ತೀವ್ರ ಸ್ವರೂಪದ ರಕ್ತಗಾಯವಾಗಿತ್ತು ಎಂದರೆ ಸರಿ. ನಾಗಯ್ಯ ಪೂಜಾರಿಯವರನ್ನು ಕುಂದಾಪುರಕ್ಕೆ ಆಂಬುಲೆನ್ಸ ನಲ್ಲಿ ಕಳುಹಿಸಿಕೊಟ್ಟಿರುತ್ತೀರಿ ಎಂದರೆ ಸರಿ.

ಅಪಘಾತದಿಂದ ಕಾರಿನೊಳಗೆ ಇದ್ದ ಚಾಸಾ 1 ರವರಿಗೂ ತರಚಿದ ಗಾಯವಾಗಿರುತ್ತದೆ ಎಂದು ನಿಮಗೆ ತಿಳಿಯಿತು ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ನಾಗಯ್ಯ ಪೂಜಾರಿಯವನ್ನು ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿ ಮಧ್ಯ ಮೃತ ಪಟ್ಟಿರುತ್ತಾರೆ ಎಂದು ನಿಮಗೆ ಗೊತ್ತಾಯಿತು ಎಂದರೆ ಸರಿ. ಅಪಘಾತಕ್ಕೆ ಆರೋಪಿಯ ಅತಿವೇಗ ಹಾಗು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್.ಪಿ.ಸಿ. ರವರಿಂದ</u>**

ಏನೂ ಇಲ್ಲ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಬೈಂದೂರು**